- -

ಸಿ.ಸಿ. ಸಂಖ್ಯೆ : 5820/2025
ಪಿ.ಡಬ್ಲ್ಯೂ : 01

**ದಿನಾಂಕಃ 05-08-2026 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು : ಆರೋಪಿ ಪರ ಶ್ರೀ. ಎಂ.ಎನ್ ವಕೀಲರಿಂದಃ-**

**7.** ಆರೋಪಿಗೆ ಸಾಲ ನೀಡುವ ಸಮಯದಲ್ಲಿ ಆಕೆಯಿಂದ ನಾನು ದಾಖಲೆ ಪಡೆದುಕೊಂಡಿರುತ್ತೇನೆ. ಆ ರೀತಿ ದಾಖಲೆ ಎಂದರೆ ತಲಾ 6 ಲಕ್ಷದಂತೆ ಎರಡು ಚೆಕ್ಕುಗಳನ್ನು ಪಡೆದುಕೂಂಡಿರುತ್ತೇನೆ. ಆರೋಪಿ ಚೆಕ್ಕುಗಳನ್ನು ನೀಡುವಾಗ ಅವುಗಳಲ್ಲಿ ಭರ್ತಿ ಮಾಡಿ ನೀಡಿರುತ್ತಾರೆ. ಆರೋಪಿ ನನಗೆ ಸ್ನೇಹಿತೆ ಆಗಿರುವುದಿಲ್ಲ. ನನ್ನ ದೂರಿನಲ್ಲಿ ಆರೋಪಿ ನನಗೆ ಪರಿಚಯಸ್ಥಳಲು ಎಂದು ಹೇಳಿರುತ್ತೇನೆ, ಸ್ನೇಹಿತೆ ಎಂದು ಹೇಳಿರುವುದಿಲ್ಲ. ನನ್ನ ದೂರಿನಲ್ಲಿ ಚೆಕ್ಕುಗಳಲ್ಲಿ ದಿನಾಂಕ 23-03-2025 ಎಂದು ಬರೆದುಕೊಟ್ಟಿರುತ್ತಾರೆಂದು ನಮೂದಿಸಿರುತ್ತೇನೆ. ಆ ರೀತಿ ನಮೂದು ಮಾಡಿಲ್ಲದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಸಲ್ಲಿಸಿರುವ ನಿಪಿ-10 ಮತ್ತು 11 ರಲ್ಲಿ ಹಾಗೂ ಆದಾಯ ತೆರಿಗೆ ರಿಟರ್ನ್ ನಲ್ಲಿ ಆರೋಪಿಗೆ 12 ಲಕ್ಷ ನೀಡಿರುವ ಬಗ್ಗೆ ತೋರಿಸಿರುವುದಿಲ್ಲ ಎಂದರೆ ಸರಿ. ನನ್ನ ಬ್ಯಾಂಕ್ ಖಾತೆ ಸ್ಟೇಟ್ಮೆಂಟ್ ನಲ್ಲಿ ಆರೋಪಿಗೆ ನಾನು 12 ಲಕ್ಷ ನೀಡಿರುವ ಬಗ್ಗೆ ಎಲ್ಲಿಯೂ ನಮೂದು ಆಗಿಲ್ಲ ಎಂದರೆ ಸಾಕ್ಷಿಯು ನಾನು ಪಿರ್ಯಾದಿಗೆ ಹಣವನ್ನು ನಗದಾಗಿ ನೀಡಿರುತ್ತೇನೆಂದು ನುಡಿದಿರುತ್ತಾರೆ.

8. ನಿಪಿ-9 ಆರೋಪಿ ಖರೀದಿ ಮಾಡಿರುವಂತಹ ಮನೆಯ ಕ್ರಯಪತ್ರ ಎಂದರೆ ಸರಿ. ಆರೋಪಿ ಆರ್ಥಿಕವಾಗಿ ಸ್ಥಿತಿವಂತರು ಎಂದರೆ ಸರಿಯಲ್ಲ. ಆರೋಪಿ ನಿಪಿ-9 ರಂತೆ ಮನೆ ಖರೀದಿ ಮಾಡಿರುವ ಬಗ್ಗೆ ಮಾಹಿತಿ ನನಗೆ ಗೊತ್ತಿತ್ತು, ಆ ಕಾರಣದಿಂದ ನಾನು ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಿಪಿ-9 ಆರೋಪಿ ಮನೆಯಿಂದ ಕಳ್ಳತನ ಮಾಡಿಕೊಂಡು ಬಂದಂತಹ ದಾಖಲೆಗಳಲ್ಲಿ ಇದು ಒಂದು ಎಂದರೆ ಸರಿಯಲ್ಲ. ಈ ದಾಖಲೆ ಹಾಗೂ ವಿವಾದಿತ ಚೆಕ್ಕುಗಳನ್ನು ಕಳ್ಳತನ ಮಾಡಿಕೊಂಡು ಬಂದಿದ್ದೇನೆಂದು ಹೇಳಿ ಪಿರ್ಯಾದಿ ದಿನಾಂಕಃ 26-07-2025 ರಂದು ದೂರನು ನೀಡಿದ್ದರು ಎಂದರೆ ಸರಿಯಲ್ಲ.

9. ಆರೋಪಿಗೆ ನೋಟಿಸು ನೀಡುವ ಪೂರ್ವದಲ್ಲಿ ಆರೋಪಿಗೆ ನೀಡಿರುವ ಎರಡು ನೋಟಿಸುಗಳಲ್ಲಿರುವ ವಿಳಾಸಗಳು ನಿಮಗೆ ಗೊತ್ತಿತ್ತಾ ? ಎಂದರೆ ಸಾಕ್ಷಿಯು ನನಗೆ ಆರೋಪಿಯ ಒಂದು ವಿಳಾಸ ಮಾತ್ರ ನನಗೆ ಗೊತ್ತಿತ್ತು, ನಂತರ ಆಕೆಯ ಆಧಾರ ಕಾರ್ಡಿನಲ್ಲಿರುವಂತಹ ವಿಳಾಸಕ್ಕೂ ಕೂಡ ನಾನು ನೋಟಿಸು ಕಳುಹಿಸಿರುತ್ತೇನೆ. ಆರೋಪಿಯ ಆಧಾರ ಕಾರ್ಡಿನ ವಿಳಾಸ ನನಗೆ ನೆನಪಿರುವುದಿಲ್ಲ. ಆರೋಪಿಯ ಆಧಾರ ಕಾರ್ಡ ನನ್ನ ಬಳಿ ಇರುತ್ತದೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತೀರಾ ಎಂದರೆ ಸಾಕ್ಷಿ ಆರೋಪಿ ನನಗೆ ವಾಟ್ಸಪ್ ನಲ್ಲಿ ಕಳುಹಿಸಿರುತ್ತಾರೆಂದು ನುಡಿದಿರುತ್ತಾರೆ. ಆ ರೀತಿ ಕಳುಹಿಸಿದ ದಿನಾಂಕ ಸಮಯ ನನಗೆ ವಾಟ್ಸಪ್ ನೋಡಿದರೆ ಹೇಳುತ್ತೇನೆ. ಆರೂಪಿ ತನ್ನ ಮನೆಯಲ್ಲಿ ದಾಖಲೆ ಮತ್ತು ಚೆಕ್ಕುಗಳು ಕಳೆದು ಹೋಗಿದ್ದ ಬಗ್ಗೆ ದೂರು ನೀಡಿದಾಗ ಪೋಲಿಸರು ನನ್ನನ್ನು ಕರೆಯಿಸಿ ವಿಚಾರಣೆ ಮಾಡಿದ್ದರು ಎಂದರೆ ಸರಿ. ನಂತರ ನಾನು ಮತ್ತು ನನ್ನ ತಂದೆ ಇಬ್ಬರು ಪೋಲಿಸರ ಮುಂದೆ ಆರೋಪಿಯ ಮನೆಯಿಂದ ಪಡೆದುಕೊಂಡಿರುವ ದಾಖಲೆಗಳನ್ನು ಮತ್ತು ಚೆಕ್ಕುಗಳನ್ನು ವಾಪಸ್ಸು ಕೊಡುತ್ತೇವೆಂದು ಹೇಳಿದ್ದೇವು ಎಂದರೆ ಸರಿಯಲ್ಲ.

10. ಸಾಕ್ಷಿಗೆ ನಿಪಿ-1 ಚೆಕ್ಕನ್ನು ಹಾಗೂ ಅಂಚೆ ಸ್ವೀಕೃತಿಯಲ್ಲಿ ಹಾಗೂ ನಿಪಿ-9 ಕ್ರಯಪತ್ರದಲ್ಲಿ ಇರುವಂತಹ ಸಹಿಗಳಲ್ಲಿ ವ್ಯತ್ಯಾಸಗಳು ಇವೆ ಎಂದರೆ ಸರಿಯಲ್ಲ. ಆರೋಪಿಯ ಮನೆಯಲ್ಲಿ ಇದ್ದಂತಹ ದಾಖಲೆಗಳು ಹಾಗೂ ಚೆಕ್ಕುಗಳನ್ನು ಕಳ್ಳತನ ಮಾಡಿಕೊಂಡು ಹೋಗಿ ಈ ಸುಳ್ಳು ದೂರನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಹಾಗೂ ಆರೋಪಿಯ ನಡುವೆ ಯಾವುದೇ ಹಣದ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನಾನು ಯಾವತ್ತೂ 12 ಲಕ್ಷ ಹಣವನ್ನು ಕೊಟ್ಟಿಲ್ಲ ಹಾಗೂ ಅದರ ಮರುಪಾವತಿಗಾಗಿ ಆರೋಪಿ ನನಗೆ ವಿವಾದಿ ಚೆಕ್ಕುಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ಚೆಕ್ಕುಗಳಲ್ಲಿರುವ ಸಹಿ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ. ಬ್ಯಾಂಕ್ ಸಿಬ್ಬಂದಿಯೊಂದಿಗೆ ಮಿಲಾಪೆಯಾಗಿ ನಾನು ವಿವಾದಿತ ಚೆಕ್ ಸಾಕಷ್ಟು ಹಣ ವಿಲ್ಲದೆ ಅಮಾನ್ಯಗೊಂಡಿದೆ ಎಂಬ ಕಾರಣವನ್ನು ಬರೆಯಿಸಿಕೊಂಡು ಬಂದಿರುತ್ತೇನೆಂದರೆ ಸರಿಯಲ್ಲ.

11. ನನ್ನ ಅಣ್ಣ ಜಯರಾಜ್ ಪತ್ರಕರ್ತರು ಎಂದರೆ ಸರಿ. ಅವರು ಈ ದಿವಸ ನ್ಯಾಯಾಲಯಕ್ಕೆ ಬಂದಿದ್ದರು ಎಂದರೆ ಸರಿ. ಅವರ ಪ್ರಭಾವವನ್ನು ಬಳಸಿಕೊಂಡು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಈ ಪ್ರಕರಣ ದಾಖಲಿಸಿರುತ್ತೇನೆಂದರೆ ಸರಿಯಲ್ಲ.

**( ಈ ಪ್ರಕರಣದಲ್ಲಿ ಮಾಡಿರುವಂತಹ ಪಾಟೀ ಸವಾಲನ್ನೇ ಸಿಸಿ ನಂಬರ್-5820/2025 ರಲ್ಲಿ ಅಳವಡಿಸಿಕೊಳ್ಳಬೇಕಾಗಿ ಆರೋಪಿ ಪರ ವಕೀಲರು ಕೋರಿದ್ದು, ಅದರಂತೆ ಸದರಿ ಸಾಕ್ಷ್ಯ ವಿಚಾರಣೆಯನ್ನು ಸಿಸಿ ನಂಬರ್-5820/2025 ರಲ್ಲಿ ಅಳವಡಿಸಿಕೊಂಡಿರುತ್ತೇನೆ )**

**ಮರು ವಿಚಾರಣೆ ಃ ಇರುವುದಿಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು )

ಓ. ಹೇ. ಕೇ. ಸ. ಎಂ. ಒ. ನನ್ನ ಸಮಕ್ಷಮ,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಲಯ, ಮಾಗಡಿ.